

ಶರಾಬಿ ಚಿತ್ರದ ಮುಝೆ ನೌಲಕ್ಖಾ ಮಂಗಾದೇ ರೆ ಓ ಸಂಯ್ಯಾ ದೀವಾನಿ ಹಾಡಿಗೆ ನರ್ತಿಸಿದ ಜಯಪ್ರದಾ



ಇಜಾಜತ್ ಚಿತ್ರದಲ್ಲಿ ಮೇರಾ ಕುಛ್ ಸಾಮಾನ್...



ಶಮಿತಾ ಶೆಟ್ಟಿಯ ಶರಾರಾ ಶರಾರಾ ಹಾಡಿಗೆ ಧ್ವನಿಯಾಗಿದ್ದರು ಆಶಾ



ಲತಾ ಮಂಗೇಷ್ಕರ್ ಜೊತೆ ಆಶಾ



ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ ಆಶಾ

ಅಪ್ಪ ದೀನಾನಾಥ್ ಮಂಗೇಷ್ಕರ್ ಅಕಾಲದಲ್ಲಿ ತೀರಿಹೋದ ಮೇಲೆ 13–14ರ ಲತಾ ಮಂಗೇಷ್ಕರ್ ಮನೆಯ ದುಡಿಯುವ ದನಿ, ಮನೆಯ ಯಜಮಾನಿ ಆಗುತ್ತಾರೆ. ಒಂದು ಹಂತದಲ್ಲಿ ಆಶಾ ಮತ್ತು ಲತಾ ನಡುವೆ ಸ್ಪರ್ಧೆ ಶುರುವಾಗುತ್ತದೆ. ಒಂದೇ ಮನೆಯಲ್ಲಿ ಜನಿಸಿದ, ಒಟ್ಟಿಗೇ ಸಂಗೀತದ ತಾಲೀಮು ಮಾಡಿದ ಅಕ್ಕತಂಗಿಯರ ದನಿ ಒಂದೇ ರೀತಿಯಲ್ಲಿತ್ತು. ಅಕ್ಕನ 'ರೀತಿ'ಯಲ್ಲಿಯೇ ಹಾಡಿದರೆ ಯಾರಾದರೂ ನನ್ನ ಹಾಡು ಏಕೆ ಕೇಳುತ್ತಾರೆ? ಕೇವಲ 'ಆ ರೀತಿ' ಆಗುವುದು ನನಗೆ ಬೇಕಿದ್ದಿಲ್ಲ. ಅದಕ್ಕಾಗಿಯೇ ನಾನು ಹೆಚ್ಚು ಹೆಚ್ಚು ಇಂಗ್ಲಿಷ್ ಹಾಡು ಕೇಳುತ್ತಿದ್ದೆ, ಪಾಪ್ ಕೇಳುತ್ತಿದ್ದೆ, ಪಾಶ್ಚಾತ್ಯ ಶೈಲಿಯನ್ನು ನನ್ನ ಹಾಡಿನಲ್ಲಿ ತರುತ್ತಿದ್ದೆ.' ಎಂದು ಆಶಾ ನೆನಪಿಸಿಕೊಳ್ಳುತ್ತಾರೆ.

ಉತ್ಸವ್ ಚಿತ್ರದ 'ಮನ್ ಕ್ಯೂ ಮೆಹಕಾ ರೆ ಮೆಹಕಾ ಆದಿ ರಾತ್ ಮೆ' ಹಾಡು ಈ ಅಕ್ಕತಂಗಿಯರ ದನಿಯ ಮೋಹಕತೆಗೆ, ಭಿನ್ನತೆಗೆ ಸಾಕ್ಷಿ. ಮುಂದೆ ಒಂದು ಸಂದರ್ಶನದಲ್ಲಿ, 'ನಾನು ಅದೇ ಮನೆಯಲ್ಲಿ, ಅದೂ ಅಕ್ಕನಿಗೆ ನಾಲ್ಕು ವರ್ಷ ಚಿಕ್ಕವಳಾಗಿ ಹುಟ್ಟದಿದ್ದರೆ ಬಹುಶಃ ನನ್ನನ್ನೂ ಸಹ ಸಮಾನ ಪ್ರತಿಭೆ ಉಳ್ಳವಳು ಎಂದು ಪರಿಗಣಿಸುತ್ತಿದ್ದರೋ ಏನೋ. ಆದರೆ ನನ್ನ 'ಛೋಟಾಪನ್' ಅನ್ನು ನಿರಂತರವಾಗಿ ನೆನಪಿಸುತ್ತಲೇ ಬಂದರು ಎಲ್ಲರೂ' ಎಂದಿದ್ದರು. ಆಶಾ ಅಕ್ಕನಿಗಿಂತ ಭಿನ್ನವಾಗಿ ಹಾಡುವಿಕೆಯನ್ನಷ್ಟೇ ಅಲ್ಲ, ವ್ಯಕ್ತಿತ್ವವನ್ನೂ ರೂಪಿಸಿಕೊಂಡರು. ಲತಾ ದೇವರ ಮನೆಯಲ್ಲಿ ಸ್ನಿಗ್ಧವಾಗಿ ಬೆಳಗುವ ನಂದಾದೀಪವಾದರೆ, ಆಶಾ ವಿದ್ಯುತ್ ಇಲ್ಲದ ದಿನಗಳಲ್ಲಿ ಸಂಜೆ ಇಳಿದ ಮೇಲೆ ಬಳಸುವ ಕೈದೀಪ. ಮನೆಯ ಎಲ್ಲಾ ಭಾಗಕ್ಕೂ ಸೈ, ಗಾಳಿಗೆ ಹೊಯ್ದಾಡುತ್ತಲೇ, ಮನೆಮಂದಿ ಒಟ್ಟಾಗಿ ಊಟ ಮಾಡುವಾಗ ಎಲ್ಲರ ನಗುವಿನೊಂದಿಗೆ ನಗುವಾಗಲು, ಮುಚ್ಚಿದ ಬಾಗಿಲಿನ ಹಿಂದೆ ಪಿಸುಗುಟ್ಟುವ ನುಡಿಗಳಲ್ಲಿನ ಮಾದಕತೆಗೆ ಜೊತೆಯಾಗಲು, ಓದಲು, ಬರೆಯಲು, ಸುಮ್ಮನೆ ಇರಲು... ಎಲ್ಲಕ್ಕೂ ಸಾಕ್ಷಿಯಾಗುವ ಕೈದೀಪ. ಹೊರಗಿನ ಸಮಾಜದಲ್ಲಿ ಲತಾ ತುಂಬಿದ ಕೊಡ, ಎಂದೂ ತುಳುಕದ ಅಚ್ಛೋದ ಸರಸ್ಸು. ಆಶಾ ಧುಮ್ಮಿಕ್ಕುವ ಜಲಪಾತ. ಲತಾ ಕೊನೆಯ ದಿನಗಳವರೆಗೂ ಶ್ವೇತವಸನಧಾರಿ. ಆಶಾ ಮೈಮೇಲೆ ಕಾಮನಬಿಲ್ಲು. ಲತಾ ಗಂಭೀರೆ, ಆಶಾ ತನ್ನ ತಮಾಷೆ, ದೌರ್ಬಲ್ಯ ಯಾವುದನ್ನು ತೋರಿಸಿಕೊಳ್ಳಲೂ ಹಿಂಜರಿಯುತ್ತಿರಲಿಲ್ಲ. ಇಬ್ಬರೂ ಕಡೆತನಕ ಪ್ರೀತಿಯಿಂದ ಒಂದೇ ವಸ್ತುವನ್ನು ಧರಿಸಿದ್ದರೆ ಅದು ವಜ್ರಗಳು ಮಾತ್ರ, ಹಂಚಿಕೊಂಡಿದ್ದರೆ ಅದು ಸಂಗೀತ ಮಾತ್ರ!

'ಮುಷ್ಕಿಲ್ ನಹಿ ಹೈ ಕುಚ್ ಭೀ ಅಗರ್ ಠಾನ್ ಲೀಜಿಯೇ..' ಇದು ಉಮ್ರಾವ್ ಜಾನ್ ಚಿತ್ರದಲ್ಲಿ ಆಶಾ ಅವರೇ ಹಾಡಿರುವ ಹಾಡಿನ ಒಂದು ಸಾಲು. ಅದು ಆಶಾ. ಅದೇ ಚಿತ್ರದಲ್ಲಿ ಇನ್ನೊಂದು ಹಾಡಿದೆ, 'ಜುಸ್ತ್‌ಜೂ ಜಿಸ್ ಕಿ ಥಿ, ಉಸ್ ಕೋ ತೋ ನ ಪಾಯಾ ಹಮ್ ನೆ, ಇಸ್ ಬಹಾನೆ ಸೆ ಮಗರ್ ದೇಖ್ ಲಿ ದುನಿಯಾ ಹಮ್ ನೆ' – ಯಾವುದರ ಹಂಬಲ ಇತ್ತೋ ಅದನ್ನಂತೂ ಪಡೆಯಲಿಲ್ಲ ನಾನು, ಆದರೆ ಆ ನೆಪದಿಂದ ನಾನು ಜಗತ್ತನ್ನೇ ನೋಡಿದಂತಾಯಿತು' ಎಂದು. ಹೌದು, ಪ್ರೇಮ, ಗುರುತಿಸುವಿಕೆ, ಸಂಗೀತದಲ್ಲಿ ಮಾನ್ಯತೆ ಈ ಹಂಬಲದಲ್ಲಿ ಆಶಾ ದುನಿಯಾವನ್ನೇ ನೋಡಿದ್ದರು.

90 ವಯಸ್ಸನ್ನು ದಾಟಿದ ಆಶಾ ಒಂದು ಪಾಡ್ಕಾಸ್ಟ್‌ನಲ್ಲಿ ಭಾಗವಹಿಸಿದ್ದರು. 'ನೀವು ಹಾಡಿರುವ ಹಾಡುಗಳಲ್ಲಿ ಯಾವ ಮೂರು ಹಾಡುಗಳು ಥೇಟ್ ನಿಮ್ಮ ಬದುಕನ್ನೇ ಹಾಡಾಗಿಸಿವೆ?' ಎಂದು ಆಶಾರ ಮೊಮ್ಮಗನ ವಯಸ್ಸಿನ ಹುಡುಗ ಕೇಳಿದ. ಅದುವರೆಗೂ ನಗುತ್ತಲೇ ಇದ್ದ ಆಶಾ ಒಂದು ಕ್ಷಣ ಮೌನವಾದರು, ಆಮೇಲೆ ಉತ್ತರಿಸಿದರು :

ಮೊದಲನೆಯ ಹಾಡಿನ ಒಂದು ಸಾಲು ಹೀಗಿದೆ : 'ಜಿಸ್ ಡಾಲ್ ಪೆ ತುಮ್ ಬೈಠೆ ಹೋ ಓ ಟೂಟ್ ಭೀ ಸಕ್ತಾ ಹೈ' – ನೀನು ಯಾವ ಟೊಂಗೆಯ ಮೇಲೆ ಕುಳಿತಿರುವೆಯೋ ಆ ಟೊಂಗೆ ಮುರಿಯಲೂಬಹುದು – 91ನೆಯ ವಯಸ್ಸಿನಲ್ಲಿ ಆಶಾತಾಯಿ ಈ ಮಾತು ಹೇಳಬೇಕೆಂದರೆ ಅವರು ಅನುಭವಿಸಿದ ಅಭದ್ರತೆ ಎಷ್ಟು ಆಳವಾಗಿರಬೇಕು?

ಇನ್ನು ಎರಡನೆಯ ಹಾಡು, ಓ.ಪಿ. ನಯ್ಯರ್ ಅವರದ್ದು: ಚೈನ್ ಸೆ ಹಮ್‌ಕೋ ಕಭೀ, ಆಪನೇ ಜೀನೇ ನ ದಿಯಾ..

## ಇದರ ಹಿಂದೆ ಒಂದು ಕಥೆ ಇದೆ

ಅಕ್ಕನ ಛಾಯೆಯಿಂದ ದೂರಾಗಬೇಕು

ನಕ್ಷತ್ರವಾದ ಆಶಾ ತಾಯಿ